ಕುವೆಂಪು ವಿಶ್ವವಿದ್ಯಾಲಯ
ನಿರ್ದೇಶಕರ ಕಾರ್ಯಾಲಯ, ದೂರಶಿಕ್ಷಣ ನಿರ್ದೇಶನಾಲಯ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ – 577 451, ಶಿವಮೊಗ್ಗ ಜಿಲ್ಲೆ, ಕರ್ನಾಟಕ
ದೂರವಾಣಿ : 08282 256450 ಮತ್ತು 256246

ಸಂಖ್ಯೆ:ಕುವಿ/ದೂಶಿನಿ–04/2020–21/ ೩೨೪೧ ದಿನಾಂಕ: 08–02–2021 ೨೦

**ಸುತ್ತೋಲೆ**

ವಿಷಯ:– 2019–20ನೇ ಸಾಲಿನ ಪ್ರಥಮ/ದ್ವಿತೀಯ ಆವೃತ್ತಿಗೆ ಪ್ರವೇಶ ಪಡೆದ ಹಾಗೂ ದ್ವಿತೀಯ ಮತ್ತು ತೃತೀಯ ವರ್ಷದ ಸ್ನಾತಕ/ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಓರಿಯಂಟೇಷನ್/ ಸಂಪರ್ಕ ತರಗತಿ/ಪ್ರಾಯೋಗಿಕ ತರಗತಿಗಳ ವೇಳಾಪಟ್ಟಿ ಮತ್ತು ಪ್ರಾಯೋಗಿಕ ಪರೀಕ್ಷೆಗಳಿಗೆ ಸಂಬಂಧಿಸಿದ ವೇಳಾಪಟ್ಟಿಯ ಕುರಿತು.

***

ಕುವೆಂಪು ವಿಶ್ವವಿದ್ಯಾಲಯ ದೂರ ಶಿಕ್ಷಣ ನಿರ್ದೇಶನಾಲಯದ ಎಲ್ಲಾ ಅಧ್ಯಯನ/ ವಿದ್ಯಾರ್ಥಿ ಕಲಿಕಾ ಕೇಂದ್ರಗಳ (ಕೋ–ಆರ್ಡಿನೇಟರ್/ ಕೋರ್ಸ್ ಕೋ–ಆರ್ಡಿನೇಟರ್/ ಸಂಚಾಲಕರು/) ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, 2019–20ನೇ ಸಾಲಿಗೆ ತಮ್ಮ ಅಧ್ಯಯನ/ ವಿದ್ಯಾರ್ಥಿ ಕಲಿಕಾ ಕೇಂದ್ರಗಳಲ್ಲಿ ಪ್ರವೇಶ ಪಡೆದಿರುವ ಪ್ರಥಮ/ದ್ವಿತೀಯ ಆವೃತ್ತಿಯ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸಂಪರ್ಕ ತರಗತಿಗಳು/ಓರಿಯಂಟೇಷನ್ ಹಾಗೂ ಪ್ರಾಯೋಗಿಕ ತರಗತಿಗಳನ್ನು ಪ್ರಸಕ್ತ ಸಾಲಿನಲ್ಲಿ **ಫೆಬ್ರವರಿ–2021ರ ಮಾಹೆಯಲ್ಲಿ** ನಡೆಸುವ ಸಂಬಂಧ ವಿಶ್ವವಿದ್ಯಾಲಯ ನಿಗದಿಪಡಿಸಿರುವ ನಿಯಮಾವಳಿಗಳನ್ವಯ **Online/ Offline**ನಲ್ಲಿ ಕಡ್ಡಾಯವಾಗಿ ನಡೆಸಬೇಕಾಗಿರುತ್ತದೆ.

**ಕೋವಿಡ್–19ರ ಹಿನ್ನೆಲೆಯಲ್ಲಿ ಕರ್ನಾಟಕ ಘನ ಸರ್ಕಾರ ಹಾಗೂ ವಿಶ್ವವಿದ್ಯಾಲಯವು ಕಾಲಕಾಲಕ್ಕೆ ನೀಡಿರುವ ಎಲ್ಲಾ ಮುಂಜಾಗೃತಾ ಕ್ರಮಗಳನುಸಾರ ಅಗತ್ಯ ಕ್ರಮಕೈಗೊಳ್ಳುವುದು ಹಾಗೂ ಅಂತರ ಕಾಯ್ದುಕೊಳ್ಳುವುದು, ಸ್ಯಾನಿಟೈಸರ್ ಬಳಕೆ ಮತ್ತು ಮಾಸ್ಕ್ ಧರಿಸುವುದು ಕಡ್ಡಾಯವಾಗಿರುತ್ತದೆ.**

**ಅ. ಮುಖ್ಯವಾದ ಸೂಚನೆಗಳು:–**

1. ಪ್ರಾಂಶುಪಾಲರುಗಳು (ಕೋ–ಆರ್ಡಿನೇಟರ್/ ಕೋರ್ಸ್ ಕೋ–ಆರ್ಡಿನೇಟರ್/ ಸಂಚಾಲಕರು/) ತಮ್ಮ ಅಧ್ಯಯನ ಕೇಂದ್ರಗಳಲ್ಲಿ ಪ್ರವೇಶ ಪಡೆದಂತಹ ಸ್ನಾತಕ ಹಾಗೂ ಸ್ನಾತಕೋತ್ತರ ಮತ್ತು ಪಿ.ಜಿ.ಡಿಪ್ಲೋಮಾ ಪದವಿಗಳಿಗೆ ಸಂಬಂಧಿಸಿದ ಎಲ್ಲಾ ವಿದ್ಯಾರ್ಥಿಗಳ ಪ್ರವೇಶ ಅರ್ಜಿಗಳನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸಿ, ಅನುಮೋದನೆಗೊಂಡ ನಂತರ ವಿಶ್ವವಿದ್ಯಾಲಯದ ಪೂರ್ವಾನುಮತಿ ಪಡೆದು, ತಮ್ಮ ತಮ್ಮ ಅಧ್ಯಯನ ಕೇಂದ್ರಗಳಲ್ಲಿ ಸಂಪರ್ಕ ತರಗತಿಗಳು/ ಓರಿಯಂಟೇಷನ್ ಹಾಗೂ ಪ್ರಾಯೋಗಿಕ ತರಗತಿಗಳನ್ನು ಪ್ರಾರಂಭಿಸಬೇಕಾಗಿರುತ್ತದೆ.
2. ಆದರೆ, **ಯಾವುದೇ ವಿದ್ಯಾರ್ಥಿಯ ಪ್ರವೇಶ ನೋಂದಣಿಯು ದೂರ ಶಿಕ್ಷಣ ನಿರ್ದೇಶನಾಲಯದಿಂದ ಅನುಮೋದನೆಯಾಗದೆ, ಸಂಪರ್ಕ ತರಗತಿಗಳು/ ಓರಿಯಂಟೇಷನ್ ಹಾಗೂ ಪ್ರಾಯೋಗಿಕ ತರಗತಿಗಳಿಗೆ ಭಾಗವಹಿಸಲು ಅನುಮತಿಸುವಂತಿಲ್ಲ.** ತಪ್ಪಿದಲ್ಲಿ, ದೂಶಿನಿಯು ಅಂತಹ ಅಧ್ಯಯನ ಕೇಂದ್ರದ ವಿರುದ್ಧ ಕಠಿಣ ಕ್ರಮಕೈಗೊಳ್ಳಲಾಗುವುದು.
3. ಪ್ರಸಕ್ತ ಸಾಲಿನಲ್ಲಿ ತಮ್ಮ ಅಧ್ಯಯನ ಕೇಂದ್ರದಲ್ಲಿ ಪ್ರವೇಶ ಪಡೆದಂತಹ ಸ್ನಾತಕ (ಪ್ರಥಮ) ಹಾಗೂ ಸ್ನಾತಕೋತ್ತರ (ಪ್ರಥಮ) ಮತ್ತು ಪಿ.ಜಿ.ಡಿಪ್ಲೋಮಾ ಹಾಗೂ ದ್ವಿತೀಯ ಮತ್ತು ತೃತೀಯ ವರ್ಷದ ಪದವಿಗಳ ವಿದ್ಯಾರ್ಥಿಗಳು ಪ್ರಸಕ್ತ ಸಾಲಿನಲ್ಲಿ ನಡೆಸುವ ಸಂಪರ್ಕ ತರಗತಿಗಳು/ ಓರಿಯಂಟೇಷನ್ ಹಾಗೂ ಪ್ರಾಯೋಗಿಕ ತರಗತಿಗಳಿಗೆ ಹಾಜರಾಗಬೇಕು. ಮತ್ತು ಪ್ರಾಯೋಗಿಕ ಪರೀಕ್ಷೆಗಳನ್ನು ತೆಗೆದುಕೊಳ್ಳಬೇಕು. ಒಂದು ವೇಳೆ ವಿದ್ಯಾರ್ಥಿಯು ಅನಿವಾರ್ಯ ಕಾರಣದಿಂದ ಪ್ರಾಯೋಗಿಕ ತರಗತಿ ಹಾಗೂ ಪ್ರಾಯೋಗಿಕ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಸಾಧ್ಯವಾಗದಿದ್ದಲ್ಲಿ, ಅಂತಹ ವಿದ್ಯಾರ್ಥಿಗಳು ಸೂಕ್ತ ಕಾರಣ ನೀಡಿ ಸಂಬಂಧಿಸಿದ ದಾಖಲೆಗಳನ್ನು ಈ ಕಛೇರಿಗೆ ಸಲ್ಲಿಸಿ, ಅನುಮತಿ ಪಡೆದು ನಂತರ ಪ್ರಾಯೋಗಿಕ ತರಗತಿ ಹಾಗೂ ಪ್ರಾಯೋಗಿಕ ಪರೀಕ್ಷೆಗಳನ್ನು ತೆಗೆದುಕೊಳ್ಳಬೇಕಾಗಿರುತ್ತದೆ.



Scanned with CamScanner

4. ಪುನರಾವರ್ತಿತ ವಿದ್ಯಾರ್ಥಿಗಳು ಸಂಪರ್ಕ/ ಓರಿಯಂಟೇಷನ್ ತರಗತಿಗಳಿಗೆ ಭಾಗವಹಿಸುವಂತಿಲ್ಲ ಹಾಗೂ IA ಪುಸ್ತಕಗಳನ್ನು ಪುನಃ ಸಲ್ಲಿಸುವಂತಿಲ್ಲ. ಹೆಚ್ಚಿನ ವಿಷಯಗಳಿಗೆ ದೂರ ಶಿಕ್ಷಣ ನಿರ್ದೇಶನಾಲಯದ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ಆ. ಸಂಪರ್ಕ ತರಗತಿಗಳು/ ಓರಿಯಂಟೇಷನ್ ಹಾಗೂ ಪ್ರಾಯೋಗಿಕ ತರಗತಿಗಳ ವೇಳಾಪಟ್ಟಿಯನ್ನು ಸಲ್ಲಿಸುವ ಕುರಿತು:-

1. ಸಂಪರ್ಕ ತರಗತಿಗಳು/ಓರಿಯಂಟೇಷನ್ ಹಾಗೂ ಪ್ರಾಯೋಗಿಕ ತರಗತಿಗಳನ್ನು 2019-20ನೇ ಸಾಲಿನ ಪ್ರಥಮ ಮತ್ತು ದ್ವಿತೀಯ ಆವೃತ್ತಿಯ ಫೆಬ್ರವರಿ-2021ರ ಮಾಹೆಯಲ್ಲಿ ನಡೆಸಬೇಕಾಗಿರುತ್ತದೆ. **22-02-2021 ದಿನಾಂಕಕ್ಕಿಂತ ಮುಂಚಿತವಾಗಿ ನಡೆಸಬಾರದು.**

2. ಅಧ್ಯಯನ/ ವಿದ್ಯಾರ್ಥಿ ಕಲಿಕಾ ಕೇಂದ್ರಗಳು ತಮ್ಮ ಅಧ್ಯಯನ ಕೇಂದ್ರಗಳಲ್ಲಿ ನಡೆಸುವ ಸಂಪರ್ಕ ತರಗತಿಗಳು/ ಓರಿಯಂಟೇಷನ್ ಹಾಗೂ ಪ್ರಾಯೋಗಿಕ ತರಗತಿಗಳ ವಿವರವಾದ ವೇಳಾಪಟ್ಟಿಯನ್ನು ದೂಶಿನಿ ನಿಗದಿಪಡಿಸಿರುವ ಮಾದರಿಯಲ್ಲಿ ಸಲ್ಲಿಸಬೇಕು.

3. ದೂಶಿನಿ ಸಿದ್ಧಪಡಿಸಿರುವ ಮಾದರಿಯನ್ನು directorddeku2020@gmail.comಗೆ ಇ-ಮೇಲ್ ಮೂಲಕ ಕೋರಿಕೆ ಸಲ್ಲಿಸಿ, ಪಡೆದುಕೊಳ್ಳಬಹುದಾಗಿರುತ್ತದೆ.

4. ದೂಶಿನಿ ನಿಗದಿಪಡಿಸಿರುವ ಮಾದರಿಯನುಸಾರ ಅಧ್ಯಯನ/ ವಿದ್ಯಾರ್ಥಿ ಕಲಿಕಾ ಕೇಂದ್ರಗಳು ತಮ್ಮಲ್ಲಿ ನಡೆಸುವ ಸ್ನಾತಕ (ಪ್ರಥಮ) ಸ್ನಾತಕೊತ್ತರ (ಪ್ರಥಮ)/ ದ್ವಿತೀಯ ಮತ್ತು ತೃತೀಯ ವರ್ಷದ ಸ್ನಾತಕ/ ಸ್ನಾತಕೋತ್ತರ ಮತ್ತು ಪಿ.ಜಿ.ಡಿಪ್ಲೋಮಾ ಪದವಿಗಳ ಕೋರ್ಸುಗಳ ಸಂಪರ್ಕ ತರಗತಿಗಳು/ ಓರಿಯಂಟೇಷನ್ ಹಾಗೂ ಪ್ರಾಯೋಗಿಕ ತರಗತಿಗಳ ವಿವರವಾದ ವೇಳಾಪಟ್ಟಿಯನ್ನು ದೂಶಿನಿಗೆ ಲಗತ್ತಿಸಿ ಕಳುಹಿಸಿಕೊಡಬೇಕಾಗಿರುತ್ತದೆ.

5. ಅಧ್ಯಯನ/ ವಿದ್ಯಾರ್ಥಿ ಕಲಿಕಾ ಕೇಂದ್ರಗಳು ಸಲ್ಲಿಸುವ ವಿವರದಲ್ಲಿ ದಿನಾಂಕ, ಸಮಯ ಮತ್ತು ಕಾಲೇಜಿನ ಹೆಸರು, ವಿಳಾಸ ಹಾಗೂ ಸಂಪರ್ಕ ತರಗತಿಗಳು/ ಓರಿಯಂಟೇಷನ್ ಹಾಗೂ ಪ್ರಾಯೋಗಿಕ ತರಗತಿಗಳನ್ನು ನಡೆಸುವ ಬಾಹ್ಯ (External) ಹಾಗೂ ಆಂತರಿಕ (Internal) ಪರೀಕ್ಷಕರ ಹೆಸರು, ಹುದ್ದೆ, ವಿಳಾಸ ಮತ್ತು ಸೇವಾ ವಿವರ ಕಡ್ಡಾಯವಾಗಿ ನಮೂದಿಸಬೇಕಾಗಿರುತ್ತದೆ.

6. ಮೇಲೆ ತಿಳಿಸಿದ ಸಂಪರ್ಕ ತರಗತಿಗಳು/ ಓರಿಯಂಟೇಷನ್ ಹಾಗೂ ಪ್ರಾಯೋಗಿಕ ತರಗತಿಗಳ ವೇಳಾಪಟ್ಟಿ ಹಾಗೂ ದೂಶಿನಿ ನಿಗದಿಪಡಿಸಿರುವ ಮಾದರಿಯನುಸಾರ ಸಿದ್ಧಪಡಿಸಿದ ಪಟ್ಟಿಯನ್ನು ತಮ್ಮ ಸಲ್ಲಿಸಿ, ಅನುಮೋದನೆಯನ್ನು ಪಡೆದುಕೊಳ್ಳಬೇಕಾಗಿರುತ್ತದೆ.

7. ದೂಶಿನಿಯ ಪೂರ್ವಾನುಮತಿ ಪಡೆದ ನಂತರವೇ ಸಂಪರ್ಕ ತರಗತಿಗಳು/ ಓರಿಯಂಟೇಷನ್ ಹಾಗೂ ಪ್ರಾಯೋಗಿಕ ತರಗತಿಗಳನ್ನು ಪ್ರಾರಂಭಿಸಬೇಕಾಗಿರುತ್ತದೆ.

8. ನಿರ್ದೇಶಕರು, ದೂಶಿನಿ ಇವರಿಂದ ಪೂರ್ವಾನುಮತಿ ಪಡೆಯದೇ ಸಂಪರ್ಕ ತರಗತಿಗಳು/ ಓರಿಯಂಟೇಷನ್ ಹಾಗೂ ಪ್ರಾಯೋಗಿಕ ತರಗತಿಗಳನ್ನು ನಡೆಸಿದಲ್ಲಿ, ಅಂತಹ ತರಗತಿಗಳು ನಡೆದಿಲ್ಲ ಎಂದು ಭಾವಿಸಲಾಗುತ್ತದೆ ಹಾಗೂ ವಿದ್ಯಾರ್ಥಿಗಳ ಹಾಜರಾತಿ ಅಂಕಗಳನ್ನು IA ಅಂಕಗಳೊಂದಿಗೆ ಸೇರಿಸಲಾಗುವುದಿಲ್ಲ. ಇದರಿಂದ ಆಗುವ ಅನಾನುಕೂಲಗಳಿಗೆ ಅಧ್ಯಯನ/ ವಿದ್ಯಾರ್ಥಿ ಕಲಿಕಾ ಕೇಂದ್ರದ ಕೋ-ಆರ್ಡಿನೇಟರ್/ ಕೋರ್ಸ್ ಕೋ-ಆರ್ಡಿನೇಟರ್/ ಸಂಚಾಲಕರು/ ಪ್ರಾಂಶುಪಾಲರುಗಳೇ ಜವಾಬ್ದಾರರಾಗಿರುತ್ತಾರೆ.

9. ವಿಜ್ಞಾನ ವಿಷಯದ ವಿದ್ಯಾರ್ಥಿಗಳು ಸಂಪರ್ಕ ತರಗತಿಗಳು/ ಪ್ರಾಯೋಗಿಕ ತರಗತಿಗಳಿಗೆ ಹಾಜರಾಗಬೇಕಾಗಿರುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಅಧ್ಯಯನ ಕೇಂದ್ರದವರು ಸಿದ್ಧಪಡಿಸಿರುವ ವೇಳಾಪಟ್ಟಿಯನುಸಾರ ತರಗತಿಗಳಿಗೆ ಹಾಜರಾಗಬೇಕಾಗಿರುತ್ತದೆ ಹಾಗೂ ಅಧ್ಯಯನ ಕೇಂದ್ರದವರು ಸಂಬಂಧಪಟ್ಟ ವಿದ್ಯಾರ್ಥಿಗಳ ಹಾಜರಾತಿಯನ್ನು ನಿಯಮಾನುಸಾರ ಗಣನೆಗೆ ತೆಗೆದುಕೊಳ್ಳಬೇಕಾಗಿರುತ್ತದೆ.

---3



Scanned with CamScanner

10. ಯಾವುದೇ ವಿದ್ಯಾರ್ಥಿ ಸಂಪರ್ಕ ತರಗತಿಗಳು/ ಪ್ರಾಯೋಗಿಕ ತರಗತಿಗಳಿಗೆ ಹಾಜರಾಗದಿದ್ದಲ್ಲಿ, ಅಂತಹ ವಿದ್ಯಾರ್ಥಿಗಳನ್ನು ಪ್ರಾಯೋಗಿಕ ಹಾಗೂ ಸೈದ್ಧಾಂತಿಕ ಪರೀಕ್ಷೆಗಳಿಗೆ ಅನರ್ಹಗೊಳಿಸಲಾಗುವುದು.

11. ನೌಕರರು ಸಂಪರ್ಕ ತರಗತಿಗಳು/ ಓರಿಯಂಟೇಷನ್ ಹಾಗೂ ಪ್ರಾಯೋಗಿಕ ತರಗತಿಗಳಿಗೆ ಹಾಜರಾಗುವಾಗ ಅವರ ಇಲಾಖೆಯಲ್ಲಿ ರಜೆ ಹಾಕಿಕೊಂಡಿರಬೇಕಾಗುತ್ತದೆ.

**ಇ. ಹಾಜರಾತಿ ವಿವರ**

ಸಂಪರ್ಕ ತರಗತಿಗಳು/ ಪ್ರಾಯೋಗಿಕ ತರಗತಿಗಳಿಗೆ ಹಾಜರಾದ ವಿದ್ಯಾರ್ಥಿಗಳ ಹಾಜರಾತಿಯನ್ನು ನಿಗದಿತ ನಮೂನೆಯಲ್ಲಿ ಸಿದ್ಧಪಡಿಸಿ, ಸಂಪರ್ಕ ತರಗತಿಗಳು/ ಪ್ರಾಯೋಗಿಕ ತರಗತಿಗಳು ಮುಗಿದ ನಂತರ ದೂಶಿನಿ ಕಛೇರಿಗೆ ಕಳುಹಿಸಿಕೊಡುವುದು. ವಿದ್ಯಾರ್ಥಿಗಳ ಹಾಜರಾತಿಯನ್ನು ಕಳುಹಿಸಲು <u>ದಿನಾಂಕ:05-03-2021</u> ಅಂತಿಮ ದಿನಾಂಕವಾಗಿರುತ್ತದೆ.

**ಈ. ಪ್ರಾಯೋಗಿಕ ಪರೀಕ್ಷಾ ವೇಳಾಪಟ್ಟಿ ಕುರಿತು.**

ದೂಶಿನಿ ಸಿದ್ಧಪಡಿಸಿರುವ ನಿಗದಿತ ನಮೂನೆಯನ್ನು ಇ-ಮೇಲ್ ಕೋರಿಕೆ ಸಲ್ಲಿಸಿ, ಪಡೆದುಕೊಂಡು ಪ್ರಾಯೋಗಿಕ ಪರೀಕ್ಷಾ ವೇಳಾಪಟ್ಟಿಯನ್ನು ಪ್ರತ್ಯೇಕವಾಗಿ ನಿಗದಿತ ನಮೂನೆಯಲ್ಲಿ ಸಿದ್ಧಪಡಿಸಿ, ದೂಶಿನಿಗೆ ಸಲ್ಲಿಸಬೇಕು.

ಪ್ರಾಯೋಗಿಕ ಪರೀಕ್ಷಾ ವೇಳಾಪಟ್ಟಿಯು ಈ ಕೆಳಕಂಡ ವಿವರಗಳನ್ನು ಒಳಗೊಂಡಿರಬೇಕು.

1) ಪ್ರಾಯೋಗಿಕ ಪರೀಕ್ಷೆಯನ್ನು ನಡೆಸುತ್ತಿರುವ ಕಾಲೇಜಿನ ಹೆಸರು.
2) ವಿವಿಧ ಕೋರ್ಸುಗಳ ಪ್ರಾಯೋಗಿಕ ಪರೀಕ್ಷೆಯ ದಿನಾಂಕ ಮತ್ತು ಸಮಯ.
3) ಕೋರ್ಸುವಾರು, ವರ್ಷವಾರು ಮತ್ತು ತಂಡವಾರು ಹಾಜರಾಗುತ್ತಿರುವ ವಿದ್ಯಾರ್ಥಿಗಳ ಪಟ್ಟಿ.
4) ಪ್ರತಿ ದಿನ ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ
5) ಆಂತರಿಕ ಮತ್ತು ಬಾಹ್ಯ ಪರೀಕ್ಷಕರ ಪದನಾಮ, ವಿಳಾಸ ಮತ್ತು ಇತರೆ ಸಂಬಂಧಪಟ್ಟ ವಿವರಗಳು.

**ಉ. ಇತರೆ ಅಂಶಗಳು**

1. ಪ್ರಾಯೋಗಿಕ ಪರೀಕ್ಷಾ ವೇಳಾಪಟ್ಟಿಯು ಪ್ರಾಯೋಗಿಕ ಪರೀಕ್ಷೆ ನಡೆಸುತ್ತಿರುವ ಕಾಲೇಜು/ ಸಂಸ್ಥೆಯ ಪ್ರಾಂಶುಪಾಲರ ಮೇಲುಸಹಿಯೊಂದಿಗೆ ದೃಢೀಕೃತಗೊಂಡಿರಬೇಕು.
2. ಪ್ರಾಯೋಗಿಕ ಪರೀಕ್ಷಾ ವೇಳಾಪಟ್ಟಿಯನ್ನು ಕುಲಸಚಿವರು (ಪರೀಕ್ಷಾಂಗ) ಇವರ ಅನುಮೋದನೆ ಪಡೆಯಲು ಹಾಗೂ ಅಗತ್ಯ ಲೇಖನ ಸಾಮಗ್ರಿಗಳನ್ನು ಸಂಬಂಧಪಟ್ಟ ಅಧ್ಯಯನ ಕೇಂದ್ರಗಳಿಗೆ ರವಾನಿಸಲು ಅನುಕೂಲವಾಗುವಂತೆ ಪರೀಕ್ಷಾ ದಿನಾಂಕಕ್ಕಿಂತ ಕನಿಷ್ಠ 10 ದಿನಗಳ ಮುಂಚಿತವಾಗಿ ದೂಶಿನಿ ಕಛೇರಿಗೆ ಕಳುಹಿಸಿಕೊಡಬೇಕು.
3. <u>ಪ್ರಾಯೋಗಿಕ ಪರೀಕ್ಷಾ ವೇಳಾಪಟ್ಟಿಯ ಅನುಮೋದನೆ ಪಡೆಯುವುದು ಕಡ್ಡಾಯವಾಗಿರುತ್ತದೆ. ದೂಶಿನಿ-ಇವರ ಪೂರ್ವಾನುಮೋದನೆ ಪಡೆಯದೇ ನಡೆಸುವ ಪ್ರಾಯೋಗಿಕ ಪರೀಕ್ಷೆಗಳನ್ನು ದೂಶಿನಿ ಪರಿಗಣಿಸುವುದಿಲ್ಲ.</u>
4. ಪ್ರಾಯೋಗಿಕ ಪರೀಕ್ಷಾ ವೇಳಾಪಟ್ಟಿಯನ್ನು ದೂಶಿನಿ ಕಛೇರಿಗೆ ಸಲ್ಲಿಸಿ, ಪೂರ್ವಾನುಮೋದನೆ ಪಡೆಯದಿದ್ದಲ್ಲಿ, ವಿದ್ಯಾರ್ಥಿಗಳಿಗಾಗುವ ಅನಾನುಕೂಲಗಳಿಗೆ ಅಧ್ಯಯನ/ ವಿದ್ಯಾರ್ಥಿ ಕಲಿಕಾ ಕೇಂದ್ರದ ಪ್ರಾಂಶುಪಾಲರುಗಳೇ ಜವಾಬ್ದಾರರಾಗಿರುತ್ತಾರೆ.

—4.

Scanned with CamScanner

ಊ. ಅಂತಿಮ ದಿನಾಂಕಗಳು

1. ಎಲ್ಲಾ ಸಂಪರ್ಕ ತರಗತಿಗಳು/ ಪ್ರಾಯೋಗಿಕ ತರಗತಿಗಳು ಕೊನೆಗೊಳ್ಳುವ ದಿನಾಂಕ:04-03-2021.
2. ಹಾಜರಾತಿ ತಃಖ್ತೆಯನ್ನು ದೂಶಿನಿಗೆ ಸಲ್ಲಿಸಲು ಕೊನೆಯ ದಿನಾಂಕ:05-03-2021.

ದೂಶಿನಿಯ ಎಲ್ಲಾ ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೇಲೆ ತಿಳಿಸಿದ ಎಲ್ಲಾ ಅಂಶಗಳನ್ವಯ ದೂಶಿನಿಯ ಶೈಕ್ಷಣಿಕ ವೇಳಾಪಟ್ಟಿಯನುಸಾರ (ಅವಧಿ ವಿಸ್ತರಣೆ ಪಡೆದ ಅಧ್ಯಯನ/ ವಿದ್ಯಾರ್ಥಿ ಕಲಿಕಾ ಕೇಂದ್ರಗಳವರು ಸೇರಿದಂತೆ) ದೂಶಿನಿಯ ಸಹಕಾರದೊಂದಿಗೆ ಹೋಗಬೇಕಾಗಿ ತಿಳಿಸಲಾಗಿದೆ. ಇದರಿಂದ ನಿಗದಿತ ಸಮಯದಲ್ಲಿ ಸೈದ್ಧಾಂತಿಕ ಪರೀಕ್ಷೆಯನ್ನು ವಿಶ್ವವಿದ್ಯಾಲಯ ನಡೆಸಲು ಅನುಕೂಲವಾಗುತ್ತದೆ ಎಂಬ ಅಂಶವನ್ನು ಈ ಮೂಲಕ ತಿಳಿಸಿದೆ.

S.N 20.02.021

ನಿರ್ದೇಶಕರು

ನಿರ್ದೇಶಕರು
ದೂರ ಶಿಕ್ಷಣ ನಿರ್ದೇಶನಾಲಯ
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ-577 451

ಗೆ,

1. ಕುಲಸಚಿವರು (ಪರೀಕ್ಷಾಂಗ), ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
2. ಘನ ಉಚ್ಚನ್ಯಾಯಾಲಯದ ಮಧ್ಯಂತರ ಆದೇಶದ ಹಿನ್ನೆಲೆಯಲ್ಲಿ ಅನುಮತಿ ಪಡೆದ ಎಲ್ಲಾ ಅಧ್ಯಯನ ಕೇಂದ್ರಗಳ ಕೋ-ಆರ್ಡಿನೇಟರ್‌ಗಳಿಗೆ.
3. ಸಂಯೋಜನಾಧಿಕಾರಿಗಳು, ಎಲ್ಲಾ ಅಧ್ಯಯನ ಕೇಂದ್ರಗಳಿಗೆ
4. ಪ್ರಾಂಶುಪಾಲರುಗಳು, ಎಲ್ಲಾ ವಿದ್ಯಾರ್ಥಿ ಕಲಿಕಾ ಕೇಂದ್ರಗಳಿಗೆ

ಪ್ರತಿಗಳು:

1. ಉಪ ನಿರ್ದೇಶಕರು, ದೂರ ಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
2. ಉಪ ಕುಲಸಚಿವರು, ದೂರ ಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
3. ಅಧೀಕ್ಷಕರು (01) ಮತ್ತು (02), ದೂರ ಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
4. ನಿರ್ದೇಶಕರ ಆಪ್ತ ಸಹಾಯಕರು, ದೂರ ಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5. ಸಂಪರ್ಕಾಧಿಕಾರಿಗಳು, ದೂರ ಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
6. ಎಲ್ಲಾ ವಿಷಯ ನಿರ್ವಾಹಕರುಗಳು, ದೂರ ಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7. ಗಣಕ ವಿಭಾಗ, ದೂರ ಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
8. ಕಛೇರಿ ಪ್ರತಿ.

Scanned with CamScanner